<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ</u>

ಸಿ.ಸಿ ಃ **21/2021**

ಸಾಕ್ಷಿದಾರರ ಹೆಸರು ಃ ಟಿ ಕೆ ಪ್ರಕಾಶ್

ತಂದೆಯ ಹೆಸರು ಃ ಟಿ ಕೃಷ್ಣ ಐತಾಳ್

ವಯಸ್ಸು ಃ **44** ವರ್ಷ

ಉದ್ಯೋಗ ಃ ಹೋಟೆಲ್ ಕೆಲಸ

ವಾಸಸ್ಥಳ ಃ ನ ರಾ ಪುರ

ಸಿ.ಡಬ್ಲ್ಯೂ- **10**

ಪಿ.ಡಬ್ಲ್ಯೂ- **3**

ದಿನಾಂಕಃ **09.08.2024** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>

ನಾನು ನ ರಾ ಪುರ ಅರಣ್ಯ ಕಚೇರಿ ಎದುರುಗಡೆ ಹೋಟೆಲ್ ಮಾಡಿಕೊಂಡು ಇರುತ್ತೇನೆ. ಅರಣ್ಯ ಕಚೇರಿಯಲ್ಲಿ ಈ ಪ್ರಕರಣದಲ್ಲಿ ಅರಣ್ಯ ಪೊಲೀಸರು ಜಪ್ತು ಮಾಡಿಕೊಂಡ ಜಿಂಕೆ ಮಾಂಸವನ್ನು ಬೆಳಗ್ಗೆ 8.30 ಗಂಟೆಗೆ ಸದರಿ ಮಾಂಸವನ್ನು ಸುಟ್ಟು ಹಾಕಿರುತ್ತಾರೆ. ಈ ಸಂಬಂಧ ನಾನು ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ</u>

ನಾನು ಅರಣ್ಯ ಇಲಾಖೆಯವರಿಗೆ ಟೀ ಕಾಫಿ ಕೊಡುತ್ತಿದ್ದು, ಅಧಿಕಾರಿಗಳು ನಮ್ಮ ಹೋಟೆಲ್ ಗೆ ಬಂದು ಹೋಗುತ್ತಾರೆಂದರೆ ಸರಿ. ಅಧಿಕಾರಿಗಳು ನಮ್ಮ ಹೋಟೆಲ್ ಗೆ ಬಂದು ಹೋಗುವುದರಿಂದ ಅವರು ನನಗೆ ತುಂಬಾ ಪರಿಚಯ ಎಂದರೆ ಸರಿ. ಅರಣ್ಯ ಇಲಾಖೆ ಪೊಲೀಸರು ನನಗೆ ಮುಂಚಿತವಾಗಿ ನೋಟೀಸು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಸುಮ್ಮನೆ ಹೋಗಿ ಸುಡುವುದನ್ನು ನೋಡಿಕೊಂಡು ಬಂದಿರುತ್ತೇನೆ. ಪ್ರಕರಣದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ಅಧಿಕಾರಿಗಳು ಬೆಂಕಿ ಹಚ್ಚುತ್ತಿದ್ದರು. ಸದರಿ ಮಾಂಸ ಜಿಂಕೆ ಮಾಂಸ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ನನಗೆ ಅಧಿಕಾರಿಗಳು ಪರಿಚಯ ಇರುವುದರಿಂದ ಅವರ ಮಾತು

ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅರಣ್ಯ ಇಲಾಖೆ ಪೊಲೀಸರ ಮುಂದೆ ನಾನು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ09.08.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ